<u>ಅಸಲು ದಾವಾಃ-</u> 48/2016 ಡಿ.ಡಬ್ಲ್ಯೂಃ- 1

ದಿನಾಂಕಃ 23.02.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- ವಾದಿ ಪರ ಶ್ರೀ.ಯು ಕೆ ವಕೀಲರಿಂದ</u>

ನಿಡಿ 1 ನ್ನು ನಾನು ತಯಾರು ಮಾಡಿರುತ್ತೇನೆ ಎಂದರೆ ಸಾಕ್ಷಿಯು ರಾಮಪ್ಪರವರು ಎಂದು ನುಡಿಯುತ್ತಾರೆ. ನಿಡಿ 1 ರ 2 ನೇ ಪುಟದಲ್ಲಿ ಕರಡು ತಯಾರಕರು ಒಕ್ಕಣಿಕೆಯ ಕೆಳಗಡೆ ಇರುವ ಸಹಿ ನನ್ನದೇ ಎಂದರೆ ಸರಿ. ನನ್ನ ಸಹಿಯ ಕೆಳಗಡೆ ಇರುವ ಪಿ. ಆರ್. ಹನುಮಂತಪ್ಪ ದತ್ತು ತಂದೆ ಪೂಜಾರ ಮಹದೇವಪ್ಪ ಎಂದು ನಾನು ಬರೆದಿರುತ್ತೇನೆ ಎಂದರೆ ಸರಿ. ನನ್ನ ಅನುಕೂಲಕ್ಕೆ ತಕ್ಕಂತೆ ನಿಡಿ 1 ನ್ನು ನಾನು ಬರೆದಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ 1 ರ ಪತ್ರದಲ್ಲಿ ನನಗೆ ಯಾವ ಯಾವ ಆಸ್ತಿಗಳನ್ನು ತೋರಿಸಲಾಗಿರುತ್ತದೆ ಎಂದರೆ ನೆನಪಿಲ್ಲ. ಸರ್ವೆ ನಂ.1/4 ರಲ್ಲಿ 17 ಗುಂಟೆ, ಸರ್ವೆ ನಂ.5/4 ರಲ್ಲಿ 17 ಗುಂಟೆ, ಸರ್ವೆ ನಂ.32/1 ರಲ್ಲಿ 6 ಎಕರೆ, ಸರ್ವೆ ನಂ.37/5 ರಲ್ಲಿ 33 ಗುಂಟೆ, ರಿಸರ್ವೆ ನಂ.44/2 ರಲ್ಲಿ 39 ಗುಂಟೆ ನನ್ನ ಭಾಗಕ್ಕೆ ಎಂದು ನಿಡಿ 1 ರಲ್ಲಿ ತೋರಿಸಿರುತ್ತದೆ ಎಂದರೆ ಸರಿ. ಅದೇ ರೀತಿ ರಾಮಪ್ಪ ಬಿನ್ ಹನುಮಂತಪ್ಪರವರ ಹೆಸರಿಗೆ ಸರ್ವೆ ನಂ.11 ರಲ್ಲಿ 3 ಎಕರೆ 4 ಗುಂಟೆ 28/4 ರಲ್ಲಿ 1 ಎಕರೆ 36 ಗುಂಟೆ ನಿಡಿ 1 ರಲ್ಲಿ ತೋರಿಸಲಾಗಿರುತ್ತದೆ ಎಂದರೆ ಸರಿ. ನಿಡಿ 1 ವಿಭಾಗ ಪತ್ರವು ಬೆರಳಚ್ಚು ಆಗಿದ್ದು ಆದರೆ ರಾಮಪ್ಪ ಬಿನ್ ಹನುಮಂತಪ್ಪ ಇವರ ಹಿಸ್ಸೆಗೆ ಎಂದು ತೋರಿಸಿರುವ ಸರ್ವೆ ನಂ.28/4 ರಲ್ಲಿ 1 ಎಕರೆ 36 ಗುಂಟೆ ಕೈಬರಹ ಆಗಿರುತ್ತದೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ಖಾಲಿ ಬಿಟ್ಟಿದ್ದನ್ನು ಬರೆದಿರುತ್ತೇವೆ ಎಂದು ನುಡಿಯುತ್ತಾರೆ.

ನಿಡಿ 1 ರಲ್ಲಿ ನನ್ನ ಹಿಸ್ಸೆಗೆ ತೋರಿಸಿರುವ ಜಮೀನುಗಳಿಗೆ ಚೆಕ್ಕುಬಂಧಿ ತೋರಿಸಿಲ್ಲ ಎಂದರೆ ಸರಿ. ಆದರೆ ರಾಮಪ್ಪ ಬಿನ್ ಹನುಮಂತಪ್ಪರವರ ಹಿಸ್ಸೆಗೆ ತೋರಿಸಿರುವ ಜಮೀನುಗಳಿಗೆ ಚೆಕ್ಕುಬಂಧಿ ತೋರಿಸಲಾಗಿರುತ್ತದೆ ಎಂದರೆ ಸರಿ. ನಿಡಿ 1 ರ ದಾಖಲೆಯ ಆಧಾರದ ಮೇಲೆ ನನ್ನ ಹೆಸರಿಗೆ ಹಾಗೂ ರಾಮಪ್ಪ ರವರ ಹೆಸರಿಗೆ ಖಾತೆ ಬದಲಾವಣೆ ಆಗಿಲ್ಲ ಎಂದರೆ ಸಾಕ್ಷಿಯು ನನ್ನ ಹೆಸರಿಗೆ ಖಾತೆ ಆಗಿರುತ್ತವೆ ಆದರೆ ರಾಮಪ್ಪ ರವರು ಅವರ ಹೆಸರಿಗೆ ಮಾಡಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಯಾವ ಮುಟೇಷನ್ ಪ್ರಕಾರ ನನ್ನ ಹೆಸರಿಗೆ ಖಾತೆ ಆಗಿದ್ದಾವೆ ಎಂದರೆ ನೆನಪಿಲ್ಲ. ನಿಡಿ 1 ರ ಆಧಾರದ ಮೇಲೆ ಸ್ವತ್ತುಗಳ ಖಾತೆ ಬದಲಾವಣೆ ಆಗಿರುವ ಬಗ್ಗೆ ಮ್ಯುಟೇಷನ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ 1 ಆಧಾರದ ಮೇಲೆ ಸ್ವತ್ತುಗಳ ಖಾತೆ ಬದಲಾವಣೆ ಕೋರಿ ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ

ನೆನಪಿಲ್ಲ. ನಿಡಿ 1 ರ ಆಧಾರದ ಮೇರೆಗೆ ತಿಮ್ಮಪ್ಪರವರ ಹೆಸರಿಗೆ ಎಷ್ಟು ಜಮೀನು ಹೋಗಿದೆ ಎಂದರೆ 5 ಎಕರೆ ಎಂದು ನುಡಿಯುತ್ತಾರೆ.

ತಿಮ್ಮಪ್ಪರವರು ನಿಡಿ 1 ರಂತೆ 5 ಎಕರೆ ಜಮೀನನ್ನು ತನ್ನ ಹಿಸ್ಸೆಗೆ ಪಡೆದುಕೊಂಡು ಮನೆ ಬಿಟ್ಟು ಹೋಗಿರುತ್ತಾರೆ ಎಂದರೆ ಸರಿ. ತಿಮ್ಮಪ್ಪರವರು ಸದರಿ 5 ಎಕರೆ ಜಮೀನನ್ನು ನಿಡಿ 11 ಮ್ಯುಟೇಷನ್ ನಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ತಿಮ್ಮಪ್ಪರವರಿಗೆ ಹಿಸ್ಸೆ ಮಾಡುವ ಉದ್ದೇಶದಿಂದ ನಿಡಿ 1 ದಾಖಲೆಯನ್ನು ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿಯು ತಿಮ್ಮಪ್ಪ ಹಾಗೂ ರಾಮಪ್ಪರವರಿಗೆ ಹಿಸ್ಸೆ ಕೊಡಬೇಕು ಎಂದು ನಿಡಿ 1 ನ್ನು ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ 1 ರ ಪ್ರಕಾರ ನಿಡಿ 10 ರಂತೆ ತಿಮ್ಮಪ್ಪರವರ ಹೆಸರಿಗೆ ಮಾತ್ರ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ ಮುಂದುವರೆದು ಸಾಕ್ಷಿಯು ರಾಮಪ್ಪರವರು ನನ್ನನ್ನು ಯಾವತ್ತೂ ಸಹಿ ಬೇಕು ಎಂದು ಕೇಳಿಲ್ಲ ಎಂದು ನುಡಿಯುತ್ತಾರೆ. ತಿಮ್ಮಪ್ಪರವರ ಹಿಸ್ಸೆಗೆ ಹೋದಂತಹ ಸರ್ವೆ ನಂ.11 ರ ಜಮೀನು ನರಸಗೊಂಡನಹಳ್ಳಿ ಗ್ರಾಮದ್ದು ಎಂದರೆ ಸರಿ. ತಿಮ್ಮಪ್ಪರವರು ತನ್ನ ಹಿಸ್ಸೆಯ 5 ಎಕರೆ ಜಮೀನನ್ನು ತೆಗೆದುಕೊಂಡು ಹೋಗಿದ್ದರಿಂದ ತಿಮ್ಮಪ್ಪರವರು ಈ ದಾವೆಯ ಅವಶ್ಯಕ ಪಕ್ಷಗಾರರು ಅಲ್ಲ ಎಂದರೆ ನನಗೆ ಗೊತ್ತಿಲ್ಲ.

ನಿಡಿ 1 ವಿಭಾಗ ಪತ್ರದಂತೆ ತಿಮ್ಮಪ್ಪರವರ ಹೆಸರಿಗೆ ಮಾತ್ರ ಜಮೀನುಗಳ ಖಾತೆ ಬದಲಾವಣೆ ಆಗಿದೆ ಆದರೆ ನನಗೂ ಹಾಗೂ ರಾಮಪ್ಪರವರ ಹೆಸರಿಗೆ ಜಮೀನುಗಳ ಖಾತೆ ಬದಲಾವಣೆ ಆಗಿಲ್ಲ ಎಂದರೆ ಸರಿಯಲ್ಲ. ತಿಮ್ಮಪ್ಪರವರು 5 ಎಕರೆ ಜಮೀನನ್ನು ನಿಡಿ 1 ರಂತೆ ಪಡೆದುಕೊಂಡು ಹೋಗಿದ್ದರೂ ಸಹ ನಾನು ಹಾಗೂ ರಾಮಪ್ಪರವರು ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಹಾಗೂ ರಾಮಪ್ಪ ರವರ ನಡುವೆ ಜಮೀನುಗಳ ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ವಿಭಾಗ ಆಗಿದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ